**ಎಸ್.ಸಿ. ನಂ. 22/2021**

**ದೋ.ಸಾ. :34 ಫ್ರಾ.ಸಾ. :15**

ಸಾಕ್ಷಿಯ ಹೆಸರು : ಕೃಷ್ಣಾ ಡಿ ಗೌಡ

**ದಿನಾಂಕಃ 21-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

9 ನನಗೆ ಡಿಜಿಟಲ್ ಕ್ಯಾಮೆರಾ ಬಳಸುವ ಮತ್ತು ಕಂಪ್ಯೂಟರ್ ಬಳಸುವ ಬಗ್ಗೆ ಯಾವುದೇ ಪ್ರಮಾಣ ಪತ್ರ ಇರುವುದಿಲ್ಲ. ಆದರೆ, ಸೇವಾ ಪುಸ್ತಕದಲ್ಲಿ ದಾಖಲಾಗಿರುತ್ತದೆ. ಡಿಜಿಟಲ್ ಕ್ಯಾಮೆರಾ ಬಳಸಿ, ಫೋಟೊ ತೆಗೆದಾಗ ಅಥವಾ ವೀಡಿಯೋ ಮಾಡಿದಾಗ, ಅದರಲ್ಲಿ ದಿನಾಂಕ ಮತ್ತು ಸಮಯ ನಮೂದಾಗುತ್ತದೆ ಎಂದರೆ ಸರಿ. ಡಿಜಿಟಲ್ ಕ್ಯಾಮೆರಾಗಳಲ್ಲಿ ಮತ್ತು ಕಂಪ್ಯೂಟರಿನಲ್ಲಿ ಫೋಟೊ ಹಾಗೂ ವೀಡಿಯೋಗಳನ್ನು ಎಡಿಟ್ ಮಾಡಲು ಆಗುತ್ತದೆ ಎಂದರೆ ಸರಿ. ಘಟನಾ ಸ್ಥಳ ಎಂದು ಹೇಳಲಾದ ಜಾಗದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಸ್ಟೂಡಿಯೋದಲ್ಲಿ ಫೋಟೊ ಮುದ್ರಣ ಮಾಡಿಸಿದ ಬಗ್ಗೆ ರಶೀದಿಯನ್ನು ನಾನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿಲ್ಲ. ನಾನು ನೀಡಿದ 65-ಬಿ ಪ್ರಮಾಣ ಪತ್ರದಲ್ಲಿ ಫೋಟೋಗಳನ್ನು ಡಿ.ವಿ.ಡಿ.ಗೆ ವರ್ಗಾಯಿಸಲು ಬಳಸಿದ ಕಂಪ್ಯೂಟರಿನ ಮಾಹಿತಿಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ತನಿಖಾಧಿಕಾರಿಗಳ ಮಾತು ಕೇಳಿ, ನಿಪಿ-2, 5, 6, 7, 25, 26, 37, 38, 39, 43, 47, 48, 49 ಫೋಟೊಗಳನ್ನು ಮತ್ತು ನಿಪಿ-58, 60, 66, 68 ಡಿ.ವಿ.ಡಿ.ಗಳನ್ನು ಹಾಗೂ 65-ಬಿ ಪ್ರಮಾಣ ಪತ್ರಗಳಾದ ನಿಪಿ-55, 59, 63, 67 ಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ